ಶ್ರೀ ಎನ್. ಯೋಗೀಶ್ ಭಟ್ : ಆರಂಭದ ದಿವಸದಲ್ಲಿ ಇಷ್ಟಿದ್ದರೂ ಕೂಡ ನಮಗೆ ಯಾವುದೇ ಪರಿಹಾರ ಕಾಣದೆ ಇರುವುದರಿಂದ ನಾನು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ. ಮಾಹಿತಿ ತಂತ್ರಜ್ಞಾನ ಯುಗದಲ್ಲಿಯೂ ಕೂಡ ಈ ಒಂದು ರೀತಿಯಲ್ಲಿ ಹೇಳುವಂತಹದ್ದು ನಿಜವಾಗಿಯೂ ಹಾಸ್ಯಸ್ಪದವಾಗಿದೆ.

ಉಪಾಧ್ಯಕ್ಷರು : ನಾಳೆ ದಿವಸ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಕೊಡುತ್ತಾರೆ. ನಿನ್ನೆ ದಿವಸ ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕದ ಬಗ್ಗೆ.

9. ಶಾಸನ ರಚನೆ

ಅ) ವಿಷಯ: ಕರ್ನಾಟಕ ನಿರಸನಗೊಳಿರುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ 2003

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ನಿರಸನಗೊಳಿಸುವ ತಿದ್ದುಪಡಿ ವಿಧೇಯಕ 2002ನ್ನು ನಾನು ಆಗಲೇ ಮಂಡನೆ ಮಾಡಿದ್ದೇನೆ. ಇದರ ಬಗ್ಗೆ ಆಗಲೇ ಚರ್ಚೆ ಮಾಡಿದ್ದೇವೆ. ತಮಗೆ ಬೇಕಾಗಿರುವಂತಹ ಮಾಹಿತಿಯನ್ನು ಕೊಡುವುದಕ್ಕೆ ಕೊಡುತ್ತೇನೆಂದು ಹೇಳಿದ್ದೆ. ಇದರಲ್ಲಿ 9 ವ್ಯಾಲ್ಯೂಂಗಳು ಇವೆ. ಅದಕ್ಕಾಗಿ ಲೈಬ್ರರಿಯಲ್ಲಿ ಲಿಟ್ಟಿದ್ದೇನೆ. ಅವರಿಗೆ ಬೇಕಾದರೆ 9 ವ್ಯಾಲ್ಯೂಂಗಳನ್ನು ಕಳುಹಿಸಿಕೊಡುತ್ತೇನೆ, ಬೇಕಾದರೆ ಲೈಬ್ರರಿಯಲ್ಲಿ ನೋಡಬಹುದು. ಅದರ ಬಗ್ಗೆ ಒಂದು ಲಿಸ್ಟ್‌ನ್ನು ತಯಾರು ಮಾಡಿಸಿದ್ದೇನೆ. ಆ ಜಿಸ್ಟ್‌ನ್ನು ನಾನು ತಮಗೆ ಕೊಡುತ್ತೇನೆ. ಇದರ ಬಗ್ಗೆ ಸುಪ್ರಿಂಕೋರ್ಟಿನವರು ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ, Repealing Legislative scavenging ಅಂತ ಶಾಸಕಾಂಗ ಕಸ ಗುಡಿಸುವಂತಹ ಕೆಲಸ ಅಂತ ಕನ್ನಡದಲ್ಲಿ ನಾವು ಹೇಳಬಹುದು. ಆದ್ದರಿಂದ ಪ್ರತಿಯೊಂದು ಶಾಸನವನ್ನು ಹೇಗೆ ನಾವು ಅದನ್ನು ನಿರಸನಗೊಳಿಸಬೇಕು, ಏಕೆ ಗೊಳಿಸಬೇಕು, ಇದು ಪ್ರತಿ ವರ್ಷ ನಡೆಯುವಂತಹ ಕಾರ್ಯವಾಗಿದೆ. ಇದು ಸಂಸತ್ತಿನಲ್ಲಿಯೂ ಕೂಡ ನಡೆಯುತ್ತದೆ. ಶಾಸಕಾಂಗದಲ್ಲೂ ಕೂಡ ನಡೆಯುತ್ತದೆ. ನಾವು ಇಲ್ಲಿ ತಂದಿರತಕ್ಕಂತಹ 130 ಶಾಸನಗಳಲ್ಲಿ ಸುಮಾರು 130 ರಲ್ಲಿ 109, ಈ ಅಮೆಂಡ್‌ಮೆಂಟ್‌ಗಳನ್ನು ತರುತ್ತೇವೆ ಈ ಶಾಸನಗಳಲ್ಲಿ. ಈ ಅಮೆಂಟ್‌ಮೆಂಟ್ ಬಂದಾಗ ಒರಿಜಿನಲ್ ಲಾ ಜೊತೆಗೆ ಅದು ಸೇರಿಕೊಂಡು ಬಿಡುತ್ತದೆ. As amended ಅಂತ ಒರಿಜಿನಲ್ ಆಕ್ಟ್‌ಗೆ ಸೇರಿಕೊಳ್ಳುತ್ತದೆ. ಆದ್ದರಿಂದ ಈ ಅಮೆಂಡೆಡ್ ಆಕ್ಟ್ ಏನು ಉಳಿಯುತ್ತದೆ ಅದು ಉಪಯುಕ್ತಕ್ಕೆ ಬರುವುದಿಲ್ಲ. Because the amendement becomes the part and parcel of the original Bill. Therefore, ಇದು ಪ್ರಯೋಜನವಿಲ್ಲವೆನ್ನುವ ಕಾರಣಕ್ಕಾಗಿ ಇದನ್ನು ನಾವು ನಿರಸನಗೊಳಿಸುತ್ತೇವೆ. ಎರಡನೆಯದು ಸುಮಾರು 21 ಒರಿಜಿನಲ್ ಆಕ್ಟ್ಸ್ ಇದೆ, ಅದರಲ್ಲಿ 84,85,97,98,107,108,120 ಮತ್ತು 127 ಇದು ಅಪ್ರೋಪ್ರಿಯೇಷನ್ ಆಕ್ಟ್ಸ್ ಪ್ರತಿ ವರ್ಷ ನಮ್ಮ ಬಜೆಟ್ ಪಾಸಾದ ಮೇಲೆ ಅಪ್ರೋಪ್ರಿಯೆಷನ್ ಬಿಲ್ ಎಂದು ಬರುತ್ತದೆ. ರೆವಿನ್ಯೂ Assests, receipts and expenditure ಆದ ಮೇಲೆ ಆ ಅಪ್ರೋಪ್ರಿಯೇಷನ್ ಬಿಲ್ ಪಾಸಾಗುವುದಷ್ಟೇ ಕೆಲಸ, ಅದು ಆ ವರ್ಷಕ್ಕೆ ಮುಗಿದು ಹೋಗಿ ಬಿಡುತ್ತದೆ. ಅವುಗಳನ್ನು

ಇಟ್ಟುಕೊಂಡರೂ ಉಪಯೋಗವಿಲ್ಲ, ಅದಕ್ಕಾಗಿ ನಾವು ಅದನ್ನು ನಿರಸನಗೊಳಿಸುತ್ತೇವೆ. ಆಮೇಲೆ ನೀವು ಕೇಳಿರತಕ್ಕಂಥದ್ದು ಸೀರಿಯಲ್ ನಂ: 124,125 ರಿಪೀಲಿಂಗ್ ಆ್ಯಕ್ಟ್ಸ್ ಕೆಲವು ಶಾಸನಗಳನ್ನು ಮಾಡುತ್ತಾರೆ, ಅದಕ್ಕೆ ರೂಲ್‌ಗಳನ್ನು ಮಾಡುವುದಿಲ್ಲ. ಅದು ಉಪಯುಕ್ತವಾಗುವುದಿಲ್ಲ, ಅಂತಹದ್ದು ಒಂದೆರಡು ಇವೆ. ಕ್ರಮಸಂಖ್ಯೆ: 5,9.10,12,16,23 ಮತ್ತು 56 obsolets in the sense. ಈಗ ಸೀರಿಯಲ್ ನಂ: 10ರಲ್ಲಿ animal drawing vehicles ಪ್ರಾಣಿಗಳು ಎಳೆದುಕೊಂಡು ಹೋಗುವಂತಹ ವಾಹನಗಳಿಗೆ ಆಗ ಲೈಸೆನ್ಸ್‌ನ್ನು ತೆಗೆದುಕೊಳ್ಳಬೇಕು ಎಂದು ಆ ಕಾಲಕ್ಕೆ ಮಾಡಿದ್ದರು. ಈಗ ಹೊಸ ಹೊಸ fuel running vehicles ಬಂದಿರುವುದರಿಂದ ಅವು ನಿರುಪಯುಕ್ತ ಪ್ರತಿ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳು ಈ ಶಾಸನಗಳನ್ನು ನೋಡುತ್ತಿದ್ದವು. ಅವುಗಳನ್ನು ವಜಾ ಮಾಡುವಂತಹದ್ದು ಸೀರಿಯಲ್ ನಂ: 23ರಲ್ಲಿ 1973ಕ್ಕೆ ಮುಂಚೆ ಟೆನೆನ್ಸಿ ಆ್ಯಕ್ಟ್ ಎಂದು ಒಂದು ಇತ್ತು, 1974ರಲ್ಲಿ ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಬಂದ ಮೇಲೆ ಆ ಟೆನೆನ್ಸಿ ಆ್ಯಕ್ಟ್‌ಗೆ ಏನೂ ಬೆಲೆ ಇಲ್ಲ. ಆದ್ದರಿಂದ ಅದನ್ನು ನಿರಸನಗೊಳಿಸುತ್ತೇವೆ. ಹೀಗೆ ಇಂಡಸ್ಟ್ರೀಯಲ್ ಪಾಲಿಸಿ ಒಂದು ಬಿಲ್ ಆಥವಾ ಆ್ಯಕ್ಟ್ ಎಂದು ತಂದಿದ್ದೆವು. ಇಂತಹವುಗಳನ್ನು ಮಾಡಿದ್ದೇವೆ. The Acts at serial number 42, Industrial security force Act ಹೇಳಿ 1984ರಲ್ಲಿ ಮಾಡಿದ್ದೆವು. ಈಗ ಇಂಡಸ್ಟ್ರೀಯಲ್ ಪಾಲಿಸಿಯನ್ನೇ ನಾವು ಹಾಕುವುದರಿಂದ ಈ ಆ್ಯಕ್ಟ್‌ನ ಅವಶ್ಯಕತೆ ಇಲ್ಲವೆಂದು ಅದನ್ನು ವಜಾ ಮಾಡಿದ್ದೇವೆ. ಆದ್ದರಿಂದ ಇಲ್ಲಿ ಮತ್ತೊಂದು ಪಾರ್ಟ್-(2)ರಲ್ಲಿ ಇಲ್ಲಿ ನಾವು ಈ (9) ಇದರಲ್ಲಿ ನಾವು ಮಾಡಿದಂತಹ Report of one man committee preparations of the coral volumes of the Karnataka Acts. ನಿಮಗೆ ಬೇಕಾದರೆ 50 ಪುಟ ಇದು ಆಗುತ್ತದೆ ಅದನ್ನು ಮಾಡಿಸಿಟ್ಟಿದ್ದೇನೆ ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಎರಡನೆಯದು, ಕೇಂದ್ರ ಸರ್ಕಾರ ಜೈನ್ ಕಮೀಷನ್ ಎಂದು ನೇಮಕ ಮಾಡಿತ್ತು. ಆ ಜೈನ್ ಕಮೀಷನ್ ಕೆಲವು ಸಂವಿಧಾನ ಜಾರಿಗೆ ಬರುವುದಕ್ಕೆ ಮುಂಚೆ ಇದ್ದ ಶಾಸನಗಳು. ಸ್ವಾತಂತ್ರ ಬರುವುದಕ್ಕೆ ಮುಂಚೆ ಇದ್ದ ಶಾಸನಗಳು ಬೇರೆ ಸಂವಿಧಾನ ಜಾರಿಗೆ ಬರುವುದಕ್ಕೆ ಮುಂಚೆ ಇದ್ದ ಶಾಸನಗಳು ಬೇರೆ, ಅವು ಹೊಸ ಶಾಸನಗಳು ಬಂದಿದ್ದರಿಂದ ಸಂವಿಧಾನದ ಅಡಿಯಲ್ಲಿ ಅದನ್ನು ತರುವುದರಿಂದ ಅದನ್ನು ನಿರಸನಗೊಳಿಸಬೇಕೆಂದು ಹೇಳಿದೆ ಪಾರ್ಟ್ -2ರಲ್ಲಿ schedule relates to seven central Acts which are recommended for repealing by the Jain Commission ಅವನ್ನು ರಿಪೀಲ್ ಮಾಡುತ್ತಿದ್ದೇವೆ. ಅದರ ಬಗ್ಗೆ ಇನ್ನೂ ವಿವರಗಳು ಬೇಕೆಂದರೆ ನಾವು ಅದನ್ನು ತಯಾರು ಮಾಡಿಸಿಟ್ಟಿದ್ದೇನೆ. ಈ ಶಾಸನಗಳು ನಮ್ಮ ಸದಸ್ಯರಾದ ಶ್ರೀ ಎಸ್.ಎಸ್. ಪಾಟೀಲರು ಕೇಳುತ್ತಿದ್ದರು. 1997ರ ಕೋ-ಆಪರೇಟೀವ್ ಆ್ಯಕ್ಟ್ ಇವರು ಕೋ-ಆಪರೇಷನ್ ಆ್ಯಕ್ಟ್‌ಗೆ ಅಮೆಂಡ್‌ಮೆಂಟ್ ತಂದರಲ್ಲಾ, ಅದನ್ನು ತಂದ ಮೇಲೆ amendment has become a part and parcel of the original Act. ಅಮೆಂಡೆಡ್ ಆ್ಯಕ್ಟ್ ಏನಿದೆ, ಅದು ನಿರುಪಯುಕ್ತವಾಗುತ್ತದೆ. ಅದನ್ನು ರಿಪೀಲ್ಡ್ ಎಂದು ಹಾಕುತ್ತೇವೆ. ಆದರೆ ಆ್ಯಕ್ಟ್ ಹಾಗೆಯೇ ಇರುತ್ತದೆ. ನೀವು ತಂದಂತಹ ಶಾಸನ ಶಾಸನವಾಗಿಯೇ ಪರಿವರ್ತನೆಯಾದ್ದರಿಂದ ತಿದ್ದುಪಡಿಯನ್ನು ಮಾತ್ರ ನಿರಸನಗೊಳಿಸುತ್ತೇವೆ. ಆದರಷ್ಟೆ ಇದರ ಮೂಲ ಉದ್ದೇಶ. ನೀವು ಯಾವುದಕ್ಕೂ ತಿದ್ದುಪಡಿಯನ್ನು ತಂದರೂ ತಿದ್ದುಪಡಿ ಮಂಜೂರಾದರೆ.

ಶ್ರೀ ಎಸ್.ಎಸ್. ಪಾಟೀಲ್: ತಾವು ದಯವಿಟ್ಟು ಅದನ್ನು ನೋಡಬೇಕು. ಹಾಗಿಲ್ಲ ಅದು, Karnataka co-operative societies Amendement Act 1997 ಎಂದು ಹೇಳಿದರಲ್ಲಾ ಇದು ಬರೀ ನೀವು ಹೇಳಿದಷ್ಟೇ ಆಯಿತು. ನನಗೆ ತಿಳಿದಮಟ್ಟಿಗೆ ಕೆಲವು ಕೋರ್ಟಿಗೆ ಹೋಗಿ ಕೋರ್ಟಿನಲ್ಲಿ ಅದು ಅಮೆಂಡ್‌ಮೆಂಟ್ ರದ್ದಾಗಿದೆ ಎಂದು ನಾನು ಕೇಳಿದ್ದೇನೆ. ಅದು ಹೌದೇ? ಅವು ಯಾವುವು? ನಿಮ್ಮ ವಕೀಲರು ಸರಿಯಾಗಿ ವಾದ ಮಾಡಲಿಲ್ಲವೋ, ಅದಕ್ಕಾಗಿ ಕೆಲವು ಹೋಗಿದ್ದಾವೆ.

ಶ್ರೀ ಡಿ.ಬಿ. ಚಂದ್ರೇಗೌಡ: ನನಗೆ ಆ ವಿಚಾರ ಗೊತ್ತಿಲ್ಲ. ನನಗೇನೆಂದರೆ ಈಗ ನಿರುಪಯುಕ್ತವಾಗಿರುವಂತಹದ್ದನ್ನು ಕಸ ಗುಡಿಸಿ ಹಾಕುವಂತಹ ಕೆಲಸವಷ್ಟೇ ನನ್ನದು.

ಶ್ರೀ ಎಸ್.ಎಸ್. ಪಾಟೀಲ್: ಅಲ್ಲ, ಅಲ್ಲ, ನಾವು ಅಪೀಲ್ ಮಾಡಬಹುದಾಗಿತ್ತು.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಪಾಟೀಲರೆ ತಮಗೆ ನಾನು ಸೀರಿಯಲ್ ನಂಬರುಗಳನ್ನು ಕೊಡುತ್ತೇನೆ. The Act at serial numver 50 was set aside by the High Court in a writ petition No. 17642/86 on 6-11-1995. ನೀವು ಕಾಲಕ್ಕೆ ಇವೆಲ್ಲವೂ ವಜಾ ಆಗಿದ್ದಾವೆ. And the appeal filed by the Government in writ appeal No. 3092/97 was dismissed on 9-8-1997. Hence it is proposed to repeal. ಅಪೀಲ್‌ನಲ್ಲಿಯೇ ವಜಾ ಆಗಿರುವುದರಿಂದ ರೀ ಪೀಲಿಂಗ್‌ಗೆ ಕೊಟ್ಟಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಇದೇನು ಕೋರ್ಟಿನಲ್ಲಿ ವಜಾ ಆಗಿತ್ತೋ ಅಥವಾ ಏನಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಪ್ರತಿಯೊಂದು ಶಾಸನ ಹೇಗಾಗಿದೆ ಎಂಬುದರ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶವಿಲ್ಲ. ನಾನು ಹೇಳುವುದನ್ನು ತಾವು ಕೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಉಪಯುಕ್ತವಾದುದ್ದನ್ನು ಅಮೆಂಡ್ ಮೆಂಟ್‌ಗೆ ತಂದಿರುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ: ಇಲ್ಲಿರುವಂತಹ ಪ್ರಶ್ನೆ ಏನೆಂದರೆ, ತಾವು ಕೊಟ್ಟಂತಹ ಅಮೆಂಡ್‌ಮೆಂಟ್ ಏನಿದೆ ಅದು ಶಾಸನದ ಒಂದು ಭಾಗವಾಗುತ್ತದೆ. ಅದು ಒಂದು ಭಾಗವಾದಮೇಲೆ ನೀವು ತಂದಂತಹ ಅಮೆಂಡ್‌ಮೆಂಟ್ ನಿರುಪಯುಕ್ತವಾಗುತ್ತವೆ, ಆದ್ದರಿಂದ ಅದನ್ನು ನಿರಸನಗೊಳಿಸುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ನಿಲ್ಲಿಸುವ ವಿಚಾರ ಬೇರೆ. ಈಗ ಏನು ಅಮೆಂಡ್‌ಮೆಂಟ್ ಬಂದಿದೆಯಲ್ಲಾ, ಅದರ ಮೇಲೆ ಕೋರ್ಟಿಗೆ ಅಪೀಲ್ ಹೋಗಿದ್ದಾರೆ. ಹಾಗೆ ಕೆಲವು ಸೆಕ್ಷನ್‌ಗಳು ಇವೆ. ಅದನ್ನು ಸ್ವಲ್ಪ ನೋಡಿ.

ಶ್ರೀ ಡಿ.ಬಿ. ಚಂದ್ರೇಗೌಡ: ಇದರಲ್ಲಿ ಹಾಗೆ ಆಗಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಒಂದು ಕ್ಲಾರಿಫಿಕೇಷನ್ ಬೇಕು. ತಾವೇನು ಮೈನ್ ಆಕ್ಟ್‌ಗೆ ತಿದ್ದುಪಡಿಯನ್ನು ತಂದಿರುವಂಥಾದ್ದು ಉದಾಹರಣೆಗೆ ಎರಡು-ಎರಡು (ಎ)(ಬಿ) ಎಂದು ತಿದ್ದುಪಡಿಯನ್ನು ತಂದಾಗ ಮೈನ್ ಆಕ್ಟ್‌ಗೆ ಅದು ಬಂದಾಗ ಇದ್ದಂಥದ್ದು ಅದು ನಿರಸನವಾಗುತ್ತದೆ. ಅದು ಆಟೋಮ್ಯಾಟಿಕ್ ಆಗಿ ಆಗುವಂಥಾದ್ದು...

ಶ್ರೀ ಡಿ.ಬಿ. ಚಂದ್ರೇಗೌಡ: ನಾವು Ceases ಅಂತ ಇರಬೇಕು, ಅಷ್ಟೆ That is all the purpose of this repealing.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಉಪಾಧ್ಯಕ್ಷರೇ, ಈಗ ಅಪ್ರೋಪ್ರಿಯೇಷನ್ ಬಿಲ್‌ಗಳು, ಒರಿಜಿನಲ್ ಆಕ್ಟ್ ಬಂದ ಮೇಲೆ obsolate ಆಗುತ್ತದೆ ಆದು ಸರಿ. ಆದರೆ ಆಗ 1957ರಿಂದ ಈಚೆಗೆ ಇರುವುದನ್ನು ತಾವು ನಿರಸನಗೊಳಿಸುತ್ತಿದ್ದೀರಿ. 1957ಕ್ಕಿಂತ ಹಿಂದೆ ಕೆಲವನ್ನು ಇನ್ನೂ ನಿರಸನ ಗೊಳಿಸಿಲ್ಲ, ಅದು ಹಾಗೇ ಇವೆ. obsolate ಆಗಿರುವಂಥದ್ದು ಅನೇಕ ಬಿಲ್‌ಗಳು ಇವೆ. ಚಾಮಯ್ಯನವರ ವರದಿಯಲ್ಲಿ ಅದು ಬಂದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಹಿಂದಿನ ಅಧಿವೇಶನದಲ್ಲಿ ಆಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಆ ಕಮಿಟಿಯನ್ನು ಮುಂದುವರೆಸಿ ಅದರ ವರದಿಯನ್ನು ತರಿಸಿ ಕೊಂಡು ಮಾಡುತ್ತೇವೆ ಎಂದು ಮೇಲ್ಮನೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೀರಿ ಅಂತ That is my information subject to correction ಅಂಥಾದ್ದು ಇದ್ದರೆ ಪುನಃ ಮಂಡಿಸಬಹುದಿತ್ತಲ್ಲಾ? ಹಿಂದೆ ಇದ್ದಂಥ ಸಮಿತಿಯ ವರದಿಯನ್ನು ಮುಂದುವರೆಸಿದ್ದರೆ. ಅದೇರೀತಿ ಒಂದು ರಿಪೋರ್ಟನ್ನು ತೆಗೆದುಕೊಂಡು ಉಳಿದುದ್ದನ್ನು ನಿರಸನಗೊಳಿಸುವ ಸಾಧ್ಯತೆ ಇತ್ತು. ಅದನ್ನು ತಾವು ಏಕೆ ಮಾಡಬಾರದು?

ಶ್ರೀ ಡಿ.ಬಿ. ಚಂದ್ರೇಗೌಡ:1950ರಿಂದ ಇಲ್ಲಿಯವರೆಗೆ ಎಷ್ಟೆಷ್ಟು ಶಾಸನಗಳಿವೆ ಅವೆಲ್ಲವೂ ಇಲ್ಲಿ ಇವೆ. ಪ್ರತಿ ಶಾಸನಸಭೆಯಲ್ಲೂ ಅದನ್ನು ಚರ್ಚೆ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಪ್ರತಿವರ್ಷ ನಿರಸನ ಗೊಳಿಸುವುದನ್ನು ಮಾಡುತ್ತಾ ಹೋದರೆ ಹೇಗೆ ಅಕ್ಯುಮಲೇಟ್ ಆಗುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ: ಹಾಗೆ ಆಗಿಲ್ಲ. ಅದು ಎಂಟುನೂರು ಒಂಬೈನೂರು ಇತ್ತು. ಈಗ ಅದನ್ನು ನೂರಿಪ್ಪತ್ತು-ನೂರ ಮೂವತ್ತಕ್ಕೆ ತಂದಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನೀವು ಕಮಿಟಿ ಮಾಡಿರುವಂಥಾದ್ದು ಏನಿದೆ ಅದರ ರಿಪೋರ್ಟನ್ನು ತೆಗೆದುಕೊಳ್ಳಬೇಕು. 1957ಕ್ಕಿಂತ ಮುಂಚೆ ಇದ್ದುದ್ದನ್ನು ಏನು ಮಾಡುತ್ತೀರಿ? ಕಮಿಟಿಯನ್ನು ಕಂಟಿನ್ಯೂ ಮಾಡಿ.

Sri. D.B. Chandre Gowda:- It has recommended and we have taken decision. ಅದಕ್ಕೇ ನಾನು ಹೇಳಿದ್ದು. Legislative scavenging ಅಂತ ಸುಪ್ರೀಂ ಕೋರ್ಟ್‌ನವರು ಬರೆದಿದ್ದರಾ.

ಶ್ರೀ ಕೆ.ಬಿ. ಮಲ್ಲಕಾರ್ಜುನ್ (ಬೀರೂರು): ಮಾನ್ಯ ಉಪಾಧ್ಯಕ್ಷರೇ, ನಾನು ಹೇಳತಕ್ಕದ್ದು ಏನೆಂದರೆ ಇದು ಗಾಳಿಯಲ್ಲಿ ಗುದ್ದಾಟ ಅಲ್ಲ. ನೀವು ಇವತ್ತು ಹೊರಗೆ ಹೋಗಿ ಏನೇನು ಮಾಡಿ ಬಂದಿದ್ದೀರಿ ಎಂದು ಕೇಳಿದರೆ ಗಾಳಿಯಲ್ಲಿ ಗುದ್ದಾಡಿ ಬಂದಿದ್ದೇನೆ ಎಂದು ಹೇಳುತ್ತೀರೇನು? ಯಾವ್ಯಾವ ಅಧಿನಿಯಮಗಳನ್ನು ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಜನರಿಗೆ ಹೇಳಬೇಕಾಗುತ್ತದೆ. ಇಲ್ಲಿ ಪ್ರಶ್ನೆ ನಿನ್ನೆದಿವಸ ಏಕೆ ಉದ್ಭವ ಆಯಿತು ಎಂದರೆ, ನೀವು ಇಲ್ಲಿ ಉದ್ದೇಶ ಮತ್ತು ಕಾರಣಗಳು ಅಂತಪ್ರಿಂಟ್ ಮಾಡಿ ಕೊಟ್ಟಿದ್ದೀರಿ. ಇದರಲ್ಲಿ ಸ್ಪಷ್ಟವಾಗಿ ಪ್ರಿಂಟ್ ಮಾಡಿಬಿಟ್ಟಿದ್ದರೆ, ಇಂತಿಂಥ ಅಧಿನಿಯಮಗಳನ್ನು ನಾವು ಇಂತಿಂಥ ಕಾರಣಗಳಿಗೋಸ್ಕರ ತೆಗೆಯುತ್ತಿದ್ದೇವೆ ಅಂತ

ಹೇಳಬೇಕಾಗಿತ್ತು. 'ನ್ಯಾಯಾಲಯಗಳಿಂದ ಅಥವಾ ಅವಶ್ಯಕ ಇಂಗಿತ ವಿಷಯಗಳಿಂದ ತೆಗೆದು ಹಾಕಲಾದ ಅಧಿನಿಯಮಗಳು' ಎಂದರೆ ಯಾವ ನ್ಯಾಯಾಲಯದಿಂದ ತೆಗೆದುಹಾಕಲಾಗಿದೆ ಎಂದು ಹೇಳಬೇಕಲ್ಲಾ? ಕಾರಣ ನೀವು ಏನು ಹೇಳಿದ್ದು ಎಂದರೆ 109 ತಿದ್ದುಪಡಿಗಳು ಮೇನ್ ಆಕ್ಟ್‌ಗೆ ಸೇರುವುದರಿಂದ ಅವನ್ನು ನಿರಸನಗೊಳಿಸುತ್ತಿದ್ದೇವೆ ಎಂದಿರುವುದು ಸರಿ. 21 ಅಪ್ರೋಪ್ರಿಯೇಶನ್ ಆಕ್ಟ್ಸ್ ಏನಿದೆ, ಅದು ಕೆಲಸ ಮುಗಿದುಹೋಗಿದೆ. ಇದು 130 ಕೂಡ ಮುಗಿದುಹೋಗಿವೆ. ಆದರೆ ಆರನೇಯದು ಒರಿಜಿನಲ್ ಆಕ್ಟ್ ಇದೆಯಲ್ಲಾ, ಅದನ್ನು ಏಕೆ ನಿರಸನಗೊಳಿಸುತ್ತಿದ್ದೀರಿ? ಒಂಬತ್ತನೆಯದು 'ದಿ ಕರ್ನಾಟಕ ಲ್ಯಾಂಡ್ ಇಂಪ್ರೊವ್‌ಮೆಂಟ್ ಆಕ್ಟ್ 1961 ಇದು ಯಾವುದರಲ್ಲಿ ಮರ್ಜ್ ಆಯಿತು? ಹಾಗೆಯೇ ಐದನೆಯದು 'ದಿ ಕರ್ನಾಟಕ ಸ್ಟೇಟ್ ಏಯ್ಡ್ ಟು ಇಂಡಸ್ಟ್ರೀಸ್ ಆಕ್ಟ್ 1959. ಇದು ಯಾವುದರಲ್ಲಿ ಮರ್ಜ್ ಆಯಿತು? ಇವನ್ನು ನೀವು ಹೇಳಿಬಿಟ್ಟಿದ್ದರೆ ನಾವು ಕೇಳುತ್ತಿರಲಿಲ್ಲ. ಇದನ್ನು ಎಲ್ಲಿಯೂ ನೀವು ಹೇಳಿಲ್ಲ. ಇದು ಆಕ್ಟ್‌ಗಳು ಅಕ್ಯುಮಲೇಟ್ ಆಗಬಾರದು, ಸುಮ್ಮನೆ ಲೈಬ್ರರಿಯಲ್ಲಿ ದೊಡ್ಡ ದೊಡ್ಡ ಕಂತೆಯಾಗಿ ಆಕ್ಟ್‌ಗಳು ಇರಬಾರದು ಎಂದು ನಮ್ಮದೂ ಅಭಿಪ್ರಾಯ ಇದೆ. ನಾವು ಈ ಚಾಮಯ್ಯ ರಿಪೋರ್ಟ್‌ನ್ನು ಅಲ್ಪಸ್ವಲ್ಪವಾದರೂ ಓದಿದ್ದೇವೆ.

ನೀವು ಈ 130ನ್ನು ಯಾವುದಕ್ಕೋಸ್ಕರ ನಿರಸನಗೊಳಿಸುತ್ತಿದ್ದೇವೆ ಎಂದು ಹೇಳಿ ಬಿಟ್ಟಿದ್ದರೆ ನಾನು ಇದನ್ನು ನಿನ್ನೆ ಪ್ರಶ್ನೆ ಮಾಡುತ್ತಿರಲಿಲ್ಲ. ಅಮೇಲೆ ನಿಮ್ಮಲಾ ಡಿಪಾರ್ಟಮೆಂಟ್‌ನವರು ಏನು ಮಾಡುತ್ತಿದ್ದಾರೆ ಎಂದರೆ ಈ ಉದ್ದೇಶ ಮತ್ತು ಕಾರಣಗಳಿಗೆ ಮತ್ತು ಆರ್ಥಿಕ ಜ್ಞಾಪನ ಇದೆಯಲ್ಲಾ, ಅದನ್ನು ಮಕ್ಕಿಕಾಮಕ್ಕಿ ಬರೆದಿಟ್ಟು ಬಿಡುತ್ತಾರೆ. ಹಿಂದೆ ಏನಿತ್ತು ಅದನ್ನೇ ತೆಗೆದಕೊಂಡು ಬಂದು ಇಟ್ಟುಬಿಡುವುದು. ಸುಮ್ಮನೆ ಬರೆದಿಟ್ಟು ಬಿಡುತ್ತಾರೆ. ಅದು ಬೇಡ. ಆಗಿನದ್ದು ಈಗ ಪ್ರಸ್ತುತವಾಗಿರುವುದಿಲ್ಲ. ಇದರಲ್ಲಿ ಏನಾಗಿದೆ ಎಂದರೆ ನೀವು 109ನ್ನು ತಿದ್ದು ಪಡಿ ಬಿಲ್‌ನ್ನು ನಿರಸನಗೊಳಿಸುತ್ತಿದ್ದೀರಿ. ಸರಿ. ಅದನ್ನು ಹಾಗೆ ಹೇಳಿಬಿಟ್ಟರೆ ಆಯಿತಾ? 109ನೇ ಬಿಲ್‌ಗೆ ಅಮೆಂಡ್‌ಮೆಂಟ್ ಆಗಿರುವುದ್ದು ನಿರಸನಗೊಳಿಸುತ್ತಿದ್ದೇವೆ, 29 ಅಪ್ರೋಪ್ರಿಯೇಟ್ ಆಕ್ಟ್‌ಗಳನ್ನು ನಿರಸನಗೊಳಿಸುತ್ತಿದ್ದೇವೆ ಎಂದು ಹೇಳಿಬಿಟ್ಟಿದ್ದರೆ ನಾವು ಪ್ರಶ್ನೆ ಕೇಳುತ್ತಿರಲಿಲ್ಲ. ಈಗ ನೋಡಿ 1950 ನೇ ಇಸವಿಗಿಂತ ಹಿಂದೆ ಇಂತಕ್ಕಂಥ ಸೆಂಟ್ರಲ್ ಆಕ್ಟ್‌ನ್ನು ನಿರಸನಗೊಳಿಸತಕ್ಕಂಥದ್ದು ನಮಗೆ ಸಂತೋಷದ ವಿಷಯ. ಅದನ್ನು ಸ್ಪಷ್ಟವಾಗಿ ನೀವು ಪುಸ್ತಕದಲ್ಲಿ ಹೇಳಿಬಿಟ್ಟಿದ್ದರೆ ಚನ್ನಾಗಿ ಇತ್ತು. ಆಮೇಲೆ ನೀವು ಕೊಡಬೇಕಾದರೆ ಯಾವ್ಯಾವ ಆಕ್ಟ್‌ನ್ನು ಯಾವ್ಯಾವ ರೀತಿಯಲ್ಲಿ ನೀವು ನಿರಸನಗೊಳಿಸುತ್ತಿದ್ದೇವೆ ಎಂಬುದನ್ನು ಹೇಳಿದ್ದರೆ ನಾವು ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ದಯವಿಟ್ಟು ನೀವು ಮುಂದೆ ಕಾನೂನು ಇಲಾಖೆಯವರಿಗೆ ನಿರ್ದೇಶನ ಕೊಡಬೇಕು. ಹಿಂದೆ ಏನು ಕಾರಣಗಳನ್ನು ಕೊಟ್ಟಿರುತ್ತಾರೆ, ಅದು 2002 ಇಸವಿಯೊಳಗೆ ಬೇರೆಯಾಗಿರುತ್ತದೆ. ಆದರೆ ಹಿಂದೆ ಏನು ಕಾರಣ ಇತ್ತು ಅದನ್ನು ಮಕ್ಕಿಕಾಮಕ್ಕಿ ಪ್ರಿಂಟ್ ಮಾಡಿಬಿಡುತ್ತಾರೆ. ಏನೂ ಯೋಚನೆ ಕೂಡ ಮಾಡುವುದಿಲ್ಲ. ಈಗ 2002 ನೇ ಆಕ್ಟ್‌ನಲ್ಲಿ ಏನು ಉದ್ದೇಶ ಮತ್ತು ಕಾರಣಗಳಿವೆ, ಆದರಲ್ಲಿ ಒಂದು ಅಕ್ಷರವೂ ಹೆಚ್ಚುಕಡಿಮೆ ಮಾಡಿಲ್ಲ. ಹಾಗೆಯೇ ಪ್ರಿಂಟ್ ಮಾಡಿದ್ದಾರೆ. ಇದು ಆಗಬಾರದು. ಇದು ಆಗದಹಾಗೆ ನೀವು ಬದಲಾವಣೆ ಮಾಡುವುದಕ್ಕೆ ಆದೇಶ ಕೊಟ್ಟರೆ ಮತ್ತು ನೀವು ಏನು ಇಲ್ಲಿ ವಿವರಣೆಯನ್ನು ಕೊಟ್ಟಿದ್ದೀರಿ ಅದು ಸಮಾಧಾನ ಕರವಾಗಿದೆ. ಇದನ್ನು ಪಾಸ್ ಮಾಡುವುದಕ್ಕೆ ನಮ್ಮ ಅನುಮತಿ ಇದೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ವಿಧೇಯಕ" ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5 ರವರೆಗೆ

ಉಪಾಧ್ಯಕ್ಷರು: "ಖಂಡ 2ರಿಂದ 5 ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 5 ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆಗಳು ಈ ವಿಧೇಯಕದ ಭಾಗವಾಗಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): "ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾದ ರೂಪದಲ್ಲಿರುವ ಕರ್ನಾಟಕ ನಿರಸನ ಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2002" ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾದ ರೂಪದಲ್ಲಿರುವ ಕರ್ನಾಟಕ ನಿರಸನ ಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2002 ನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಆ) ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

+ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೇ, "ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕ, 2002ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನುಮಂಡಿಸಲಾಯಿತು

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ): ಇದು ಏನು ಬಿಲ್ ಮಂತ್ರಿಗಳು ಸ್ವಲ್ಪ ವಿವರಿಸಲಿ.

ಶ್ರೀ ಉಪಾಧ್ಯಕ್ಷರು: ವಿವರಣೆ ಕೊಡಿ.